ಓಎಸ್ 9/2023

ಪಿಡಬ್ಲ್ಯೂ 1

ದಿ: **26.09.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲು: ಶ್ರೀ ಜೆ.ಪಿ. ವಕೀಲರಿಂದ**

ಗೋಪಾಲಚಾರಿ ಮತ್ತು ತಿಮ್ಮಾಚಾರಿ ಇಬ್ಬರೂ ಅಣ್ಣ ತಮ್ಮಂದಿರು. ತಿಮ್ಮಾಚಾರಿಯವರ ಹಿರಿಯ ಹೆಂಡತಿಯ ಹೆಸರು ಅಮಾಣಮ್ಮಾ ಅವರಿಗೆ ಇಬ್ಬರು ಮಕ್ಕಳು. ಕಿರಿಯ ಹೆಂಡತಿಯ ಹೆಸರು ತಿಮ್ಮಮ್ಮ. ಅವರಿಗೆ 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ತಿಮ್ಮಮ್ಮನ ಗಂಡು ಮಕ್ಕಳ ಹೆಸರು ಗಣೇಶಚಾರಿ, ಗೋವಿಂದಾಚಾರಿ, ಶ್ರೀಕಂಠಾಚಾರಿ ಮತ್ತು ಆನಂದಾಚಾರಿ, ತಿಮ್ಮಮ್ಮನ ದೊಡ್ಡ ಮಗಳ ಹೆಸರು ರಾಜಮ್ಮ ಮತ್ತು ಚಿಕ್ಕವಳ ಹೆಸರು ಮಂಗಳಮ್ಮ. ದಾವ ಆಸ್ತಿಯ ಐಟಂ ನಂಃ 1ರ ಚೆಕ್ಕುಬಂದಿ ಗೊತ್ತು. ಚೆಕ್ಕುಬಂದಿ ಪೂರ್ವಕ್ಕೆ 325ರ ಜಮೀನು, ಪಶ್ಚಿಮಕ್ಕೆ ನೀರು ಹರಿಯುವ ಹಳ್ಳ, ಉತ್ತರಕ್ಕೆ ಸರ್ಕಾರಿ ಬಂಜರು ಜಮೀನು, ದಕ್ಷಿಣಕ್ಕೆ ರಸ್ತೆ ಇರುತ್ತದೆ. ದಾವ ಆಸ್ತಿಯ ಐಟಂ ನಂಃ 2ರ ಚೆಕ್ಕುಬಂದಿ ಗೊತ್ತು. ಚೆಕ್ಕುಬಂದಿ ಪೂರ್ವಕ್ಕೆ 326ರ ನಮ್ಮದೇ ಜಮೀನು, ಪಶ್ಚಿಮಕ್ಕೆ 327ರ ನಮ್ಮದೇ ಆಸ್ತಿ, ಉತ್ತರಕ್ಕೆ ಸರ್ಕಾರಿ ಬಂಜರು ಜಮೀನು, ದಕ್ಷಿಣಕ್ಕೆ ರಸ್ತೆ ಇರುತ್ತದೆ.

ನನ್ನ ತಂದೆಯ ಹೆಸರಿಗೆ ಆಸ್ತಿ ಬಂದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. 1962ರ ಇಸವಿಯಲ್ಲಿ ನನ್ನ ತಂದೆಯ ಹೆಸರಿಗೆ ದರಕಾಸ್ತು ಮೂಲಕ ಆಸ್ತಿ ಬಂದಿರುತ್ತದೆ. ಈ ಬಗ್ಗೆ ದಾಖಲಾತಿಯನ್ನು ನಮ್ಮ ವಕೀಲರಿಗೆ ಕೊಟ್ಟಿದ್ದೇನೆ. ನಮ್ಮ ವಕೀಲರು ನ್ಯಾಯಾಲಯಕ್ಕೆ ಕೊಟ್ಟಿದ್ದಾರೆ. ನಾನು ನನ್ನ ವಾದಪತ್ರದಲ್ಲಿ ನಾನು ಮತ್ತು ಪ್ರತಿವಾದಿಗಳು ದಾವ ಆಸ್ತಿ ಯಲ್ಲಿ ಜಂಟಿ ಸ್ವಾಧೀನ ಇದ್ದ ಬಗ್ಗೆ ಹೇಳಿಲ್ಲ. ನಾನು ನಮ್ಮ ವಾದ ಪತ್ರದಲ್ಲಿ ಬಂದ ಫಸಲನ್ನು ಸಮನಾಗಿ ತೆಗೆದುಕೊಳ್ಳುತ್ತಿರುವ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲ. ನಾನೇ ವಾದಪತ್ರವನ್ನು ಹೇಳಿ ಬರೆಸಿರುತ್ತೇನೆ. 2022 ಡಿಸೆಂಬರಲ್ಲಿ ಈ ಬಗ್ಗೆ ವಿಚಾರ ನನಗೆ ಗೊತ್ತಿರಲಿಲ್ಲ ನಂತರ ಗೊತ್ತಾಯಿತು. ಕೊಳ್ಳೆಗಾಲದಲ್ಲಿ ಎಸಿ ನ್ಯಾಯಾಲಯ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಾಗರಾಜಚಾರಿ ಅಂದರೆ ನಾನೇ. ವೆಂಕಟೇಶ ನನ್ನ ತಮ್ಮ. ನಾನು ಮತ್ತು ನನ್ನ ತಮ್ಮ ಕೊಳ್ಳೆಗಾಲದ ಎಸಿ ನ್ಯಾಯಾಲಯದಲ್ಲಿ ಆರ್.ಎ ನಂ 181–2007/08 ರಂತೆ ಯಾವುದೇ ಅಪೀಲನ್ನು ಹಾಕಿಲ್ಲ. ಕೊಳ್ಳೆಗಾಲದಲ್ಲಿ ಎಸಿ ನ್ಯಾಯಾಲಯದಲ್ಲಿ ನಾನು 4ನೇ ಪ್ರತಿವಾದಿಯ ಗಂಡ, 4ನೇ ಪ್ರತಿವಾದಿ, 1ನೇ ಪ್ರತಿವಾದಿ ಮತ್ತು ಗುಂಡ್ಲುಪೇಟೆ ತಹಶೀಲ್ದಾರರನ್ನು ಪಕ್ಷಗಾರರಾಗಿ ಅಪೀಲು ಹಾಕಿದ್ದೆ ಎಂದರೆ ಸರಿಯಲ್ಲ. ಆ ಅಪೀಲು 1/4/2011 ರಂದು ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ಓಎಸ್ 9/2023

ಪಿಡಬ್ಲ್ಯೂ 1

ಖಾತೆಯ ಬದಲಾವಣೆಯ ವಿಚಾರ ನನಗೆ 2007-08 ರಲ್ಲೇ ಗೊತ್ತಾಗಿದೆ ಆದರೆ ನಾನು ಈ ವಿಚಾರ ಡಿಸೆಂಬರ್ 2022 ರಲ್ಲಿ ಗೊತ್ತಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ 1987 ರಲ್ಲಿ ತೀರಿಕೊಂಡಿರುತ್ತಾರೆ. ನಾವು ದಾವ ಆಸ್ತಿಯನ್ನು ವ್ಯವಸಾಯ ಮಾಡಿಕೊಂಡು ಬಂದಿಲ್ಲ, 1 ರಿಂದ 3ನೇ ಪ್ರತಿವಾದಿಗಳೇ ವ್ಯವಸಾಯ ಮಾಡಿಕೊಂಡು ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ 1987ರಲ್ಲಿ ತೀರಿಕೊಂಡ ನಂತರ ನೀವು ವಿಭಾಗ ಮಾಡಿಕೊಳ್ಳಲು ಪ್ರಯತ್ನ ಮಾಡಲಿಲ್ಲವೇ ಎಂದರೆ ಸಾಕ್ಷಿಯು ನಾವು ಚೆನ್ನಾಗಿದ್ದೇವೆ ಹಾಗಾಗಿ ಮಾಡಿಕೊಳ್ಳಲಿಲ್ಲ ಎಂದು ನುಡಿಯುತ್ತಾರೆ. ನಾನು ಕಾರ್ ಪೆಂಟರ್ ಮತ್ತು ವ್ಯವಸಾಯ ಮಾಡುತ್ತೇನೆ. 2007 ರಿಂದ ನಾನು ಮತ್ತು ನನ್ನ ತಮ್ಮ ಮೈಸೂರಿನಲ್ಲಿ ವಾಸವಿದ್ದೇವೆ. ವಾದಿ 2, 3 ಮತ್ತು 4 ಮೈಸೂರಿನಲ್ಲಿಯೇ ವಾಸವಾಗಿದ್ದಾರೆ. ವಾದಿಗಳಾದ ನಾವುಗಳು ಕಾರ್ ಪೆಂಟರ್ ಕೆಲಸ ಮಾಡಿಕೊಂಡು ಮೈಸೂರಿನಲ್ಲಿಯೇ ವಾಸವಿದ್ದೇವೆ ಎಂದರೆ ವ್ಯವಸಾಯಕ್ಕಾಗಿ ಬಂದು ಹೋಗುತ್ತೇವೆ ಎಂದು ನುಡಿಯುತ್ತಾರೆ. 1 ವರ್ಷ ಜೋಳ, ಒಂದು ವರ್ಷ ಸೂರ್ಯಕಾಂತಿ, ಒಂದು ವರ್ಷ ಕಡ್ಲೆಕಾಳು ಬೆಳೆಯುತ್ತೇವೆ. ಯಾವ-ಯಾವ ವರ್ಷದಲ್ಲಿ ಯಾವ-ಯಾವ ಬೇಳೆ ಹಾಕಿದ್ದೇವು ಎಂಬುದನ್ನು ಹೇಳಲಾಗುವುದಿಲ್ಲ. ನಾವು ಬೆಳೆದ ಬೆಳೆಗಳನ್ನು ಮಾರಾಟ ಮಾಡುತ್ತೇವೆ. ಮಾರಾಟ ಮಾಡಿದ ಬಗ್ಗೆ ಬಿಲ್ ಸಿಗುತ್ತವೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ ಎಂದರೆ ಸರಿ. ನಾನಾಗಲಿ ನನ್ನ ತಂದೆಯಾಗಲಿ ಯಾವಾಗಲೂ ದಾವ ಆಸ್ತಿಯಲ್ಲಿ ವ್ಯವಸಾಯ ಮಾಡಿಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ಕಂದಾಯ ಕಟ್ಟಿದ ಬಗ್ಗೆ ರಶೀದಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ.

ದಾವ ಐಟಂ ನಂಃ 1 ಸರ್ವೇ ನಂಬರ್ 326ಕ್ಕೆ ಸಂಬಂಧಪಟ್ಟಂತೆ ಓಎಸ್ 94/2011 ರಂತೆ ಮಾನ್ಯ ಅಪರ ಸಿವಿಲ್ ನ್ಯಾಯಾಲಯದಲ್ಲಿ ದಾವ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಗೋಪಾಲಚಾರಿಯವರ ವಿರುದ್ಧ ಮಾನ್ಯ ಭೂನ್ಯಾಯ ಮಂಡಳಿಗೆ ಅರ್ಜಿ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಮಾನ್ಯ ಭೂನ್ಯಾಯ ಮಂಡಳಿಗೆ ಎಲ್.ಆರ್.ಕೆ ನಂ 250/1976-77 ರೀತ್ಯ ಅರ್ಜಿ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಅಲ್ಲಿ ತಿಮ್ಮಾಚಾರಿಯವರು ನಾನೇ ದಾವ ಐಟಂ ನಂಃ 1 ಮತ್ತು 2 ರ ಆಸ್ತಿಯ ಮಾಲೀಕ ಮತ್ತು ನಾನೇ ಮಾಲಿಕರೆಂದು ಅರ್ಜಿ ಕೊಟ್ಟಿದ್ದು ಎಂದರೆ ಸುಳ್ಳು. ಅದರಲ್ಲಿ ನನ್ನ ತಂದೆಯನ್ನು ಪಕ್ಷಗಾರರಾಗಿ ಮಾಡಿದ್ದರು ಎಂದರೆ ಸುಳ್ಳು . ದಿಃ 07.09.1979 ರಂದು ದಾವ ಆಸ್ತಿಗಳ ಮಾಲೀಕರು ಎಂದು ಮಾನ್ಯ ಭೂನ್ಯಾಯಮಂಡಳಿ ತಿರ್ಮಾನ ಮಾಡಿರುತ್ತದೆ ಎಂದರೆ ಸುಳ್ಳು . 1979

ಓಎಸ್ 9/2023

ಪಿಡಬ್ಲ್ಯೂ 1

ರಲ್ಲಿ ಮಾನ್ಯ ಭೂನ್ಯಾಯ ಮಂಡಳಿಯಿಂದ ತೀರ್ಮಾನ ಆದ ನಂತರ ತಿಮ್ಮಾ ಚಾರಿಯವರು ಆಸ್ತಿಗಳಾದ ದಾವ ಐಟಂ ನಂಃ 1 ಮತ್ತು 2ನ್ನು ದಿಃ 24.03.1983 ರಂದು ವಿಲ್ ಯಾ ಮರಣ ಶಾಸನದ ಮೂಲಕ ಪ್ರತಿವಾದಿ 1 ರಿಂದ 3 ರವರಿಗೆ ಆಸ್ತಿಯನ್ನು ವರ್ಗಾಯಿಸುತ್ತಾರೆ ಎಂಬ ವಿಚಾರ ಸುಳ್ಳು.

ಮಾನ್ಯ ಭೂನ್ಯಾಯಮಂಡಳಿ 1979 ರಲ್ಲಿ ತಿಮ್ಮಾಚಾರಿಯ ಪರ ಆದೇಶ ಮಾಡಿದ ನಂತರ ನಾನಾಗಲಿ ನನ್ನ ತಂದೆಯಾಗಲಿ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಆದೇಶವನ್ನು ಪ್ರಶ್ನಿಸಿಲ್ಲ ಎಂದರೆ ಸರಿ. ನಂತರ ಪ್ರತಿವಾದಿ 1 ರವರು ದಾವ ಆಸ್ತಿಯ ಐಟಂ ನಂಃ 2 1983–84 ರಿಂದ ಖಾತೆ ಬದಲಾವಣೆ ಮಾಡಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಮಗೆ 2007–08ರಲ್ಲಿ ಮಾನ್ಯ ಎಸಿ ನ್ಯಾಯಾಲಯದ ಮುಂದೆ ಆಪೀಲು ಹಾಕುವ ಪೂರ್ವದಲ್ಲಯೇ ಖಾತೆ ಬದಲಾವಣೆಯ ವಿಚಾರ ಗೊತ್ತಿತ್ತು ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿ 1 ರವರಿಗೆ ದಾವ ಐಟಂ ನಂಃ 2 ರ ಸ್ವತ್ತು 1984–85ರಲ್ಲಿಯೇ ಖಾತೆ ಬದಲಾವಣೆ ಆಗಿ ಬರುವ ವಿಚಾರ ಗೊತ್ತಿತ್ತು ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಯ ಗಂಡನಿಗೆ ದಾವ ಐಟಂ ನಂಃ 1 ರ ಸ್ವತ್ತು 1983–84ರಲ್ಲಿಯೇ ಖಾತೆ ಬದಲಾವಣೆ ಆಗಿ ಬರುವ ವಿಚಾರ ಗೊತ್ತಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ವಿಚಾರವನ್ನು ನಾವು ಎಸಿ ನ್ಯಾಯಾಲಯದಲ್ಲೂ ಕೂಡ ತಿಳಿಸಿದ್ದೇವು ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲನ್ನು ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ